O.S. 262/2012
P.W.2

**ಸಾಕ್ಷಿಯನ್ನು ದಿನಾಂಕಃ 16-10-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರವರಿಂದಃ**

ವಾದಿ ಮಾತನಾಡುವ ಸ್ಥಿತಿಯಲ್ಲಿರುವನು, ಆದರೆ ಆರೋಗ್ಯ ಅಷ್ಟಾಗಿ ಸರಿಯಿರುವುದಿಲ್ಲ. ವಾದಿಯ ಹೊಲಕ್ಕೆ ಹೊಂದಿಕೊಂಡು ನನ್ನ ಹೊಲ ಇರುವುದು, ನನಗೆ ಚೆಕ್ಕುಬಂದಿ ಹೇಳಲಾಗುವುದಿಲ್ಲ. ನನ್ನ ಹೊಲದ ಸರ್ವೇ ನಂ. 104 ಇರುವುದು, ಅದರ ಚೆಕ್ಕುಬಂದಿ ಗೊತ್ತಿಲ್ಲ. ನನಗೆ ಗಂಡು ಮಕ್ಕಳು ಇಲ್ಲ ಎಂದರೆ ಸರಿ. ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟಿದ್ದೇನೆ. ಅವರೆಲ್ಲರೂ ಬೇರೆ ಊರಿನಲ್ಲಿ ವಾಸವಿರುವರು. ನಾನು ಕಲ್ಲಳ್ಳಿಯಲ್ಲಿರುವ ನನ್ನ ಮಗಳ ಮನೆಯಲ್ಲಿ ವಾಸವಿರುವೆನು ಎಂದರೆ ಸರಿ. ಉಚ್ಚಂಗಿ ದುರ್ಗದಿಂದ ಕಲ್ಲಳ್ಳಿಗೆ 30 ಕಿ.ಮೀ ದೂರ ಇರುವುದು ಎಂದರೆ ಸರಿ. ಸರ್ವೇ ನಂ. 104 ಹೊಲವನ್ನು ನಾವು ಕೋರ್ ಗೆ ನೀಡಿದ್ದೇವೆ. ನಾನು ಖುದ್ದಾಗಿ ಬೇಸಾಯ ಮಾಡುವುದಿಲ್ಲ ಎಂದರೆ ಸರಿ.

ದಾವಾ ಜಮೀನಿನ ಪಹಣಿ ಈ ಮೊದಲು ಹನಮಂತಪ್ಪ ಕರಿಯಪ್ಪನ ಹೆಸರಿನಲ್ಲಿತ್ತು, ಆ ವಿಚಾರವನ್ನು ನನಗೆ ಯಾರು ಕೂಡ ಹೇಳಿರುವುದಿಲ್ಲ. ನನಗೆ ಓದಲು ಬರೆಯವುದಿಲ್ಲ ಎಂದರೆ ಸರಿ. ನನಗೆ ದಾವಾ ಜಮೀನಿನ ಚೆಕ್ಕುಬಂದಿ ಹೇಳಲಾಗುವುದಿಲ್ಲ. ನನಗೆ ದಾವೆಯ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನಿನ ಸುತ್ತ ಮುತ್ತ ನನ್ನ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

16.10.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**